4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸ್ಪೇಷಲ್ ಕೇಸ್ ನಂಃ533/2019
ಫ್ರಾಸಾಃ 2
ಚಾಸಾಃ 3

| | |
|---|---|
| ಸಾಕ್ಷಿಯ ಹೆಸರುಃ | ದತ್ತಾತ್ರಯ ನಾರಾಯಣ ಜಾದವ |
| ತಂದೆಯ ಹೆಸರುಃ | ನಾರಾಯಣ ಜಾದವ |
| ವಯಸ್ಸುಃ | 59 ವರ್ಷ |
| ಉದ್ಯೋಗಃ | ರಿಯಲ್ ಎಸ್ಟೇಟ್, ಬೆಳಗಾವಿ |
| ವಾಸ್ತವ್ಯಃ | ಕೆಳಕರಬಾಗ, ಬೆಳಗಾವಿ. |

ದಿನಾಂಕಃ **<u>22.02.2024</u>** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಆರ್‌ಪಿಎಡಿ ಕ್ರಾಸ ಖಾನಾಪೂರ ರಸ್ತೆ ತಿಳಕವಾಡಿಯಲ್ಲಿದ್ದ ರಸೋಯಿ ದಿ ಪಂಜಾಬಿ ಕಿಚನ್ ಇದರ ಪಾಲುದಾನೆಂದು ಇದ್ದೆನು. ನಾನು ಮತ್ತು ಚಾಸಾ-1 ರವಿ ಶಿಂದೆ ಈ ಹೊಟೇಲನ ಪಾಲುದಾರನೆಂದು ಇದ್ದೇವು. ದಿನಾಂಕ 09.07.2018 ರಂದು ನನಗೆ ಬೆಳಗಾವಿಯ ಎಸಿಬಿಯವರು ಫೋನ ಮಾಡಿ ಎಸಿಬಿ ಪೊಲೀಸ ಠಾಣೆಗೆ ಕರೆಸಿದ್ದರು. ಆ ದಿನ ನಾನು ಎಸಿಬಿ ಕಚೇರಿಗೆ ಹೋಗಿ ಪೊಲೀಸ ಇನ್ಸಪೆಕ್ಟರ ವಿಶ್ವನಾಥ ಕಬ್ಬೂರಿ ಇವರಿಗೆ ನಾನು

ಹೇಳಿಕೆ ಕೊಟ್ಟಿರುತ್ತೇನೆ. ದಿನಾಂಕ 19.06.2018 ಸಿನಿಯರ ಲೇಬರ ಇನ್ಸಪೆಕ್ಟರವರಾದ ಜಾದವ ಎನ್ನುವವರು ನಮ್ಮ ಹೊಟೇಲಗೆ ಬಂದು ಲೇಬರ ಲೈಸನ್ಸು, ಹಾಜರಿ ಪುಸ್ತಕ, ವೇತನ ಪುಸ್ತಕ ಕೇಳಿದ್ದರಿಂದ ಅವುಗಳನ್ನು ನಮ್ಮ ಹೊಟೇಲನ ಮ್ಯಾನೇಜನಾದ ಚಾಸಾ-2 ತೇಜಸ ಅವರಿಗೆ ತೋರಿಸಿದರೆಂದು, ಆ ದಾಖಲೆಗಳು ಸರಿ ಇತ್ತು. ಆದರೆ ಸದರಿ ಸಿನಿಯರ ಲೇಬರ ಇನ್ಸಪೆಕ್ಟರವರು ನಮ್ಮ ಹೊಟೇಲ ಮ್ಯಾನೇಜರರಾದ ಚಾಸಾ 2 ರವರಿಗೆ ನೀವು ಪ್ರತಿ ತಿಂಗಳಿಗೆ 1000/- ಲಂಚಕೊಡಬೇಕೆಂದು, ಎಲ್ಲರುಹೊಟೇಲನವರು ಈ ರೀತಿ ಪ್ರತಿ ತಿಂಗಳು 1000/- ಕೊಡುತ್ತಾರೆ ನೀವು ಸಹ ತಿಂಗಳಿಗೆ 1000/- ಅಥವಾ ವರ್ಷಕ್ಕೆ 10000/- ಈ ರೀತಿ ಕೊಡಬೇಕೆಂದು ಹೇಳಿದರೆಂದು, ಸದರಿ ಸಿನಿಯರ ಲೇಬರ ಇನ್ಸಪೆಕ್ಟರ ವಿಜಿಟಿಂಗ್ ಕಾರ್ಡ ಕೊಟ್ಟು ಹೋದರೆಂದು ಎಲ್ಲಾ ವಿಷಯಗಳನ್ನು ನನ್ನ ಪಾಲುದಾರರಾದ ಚಾಸಾ-1 ರವಿ ಶಿಂದೆ ದಿನಾಂಕ 19.06.2018 ರಂದೆ ಹೇಳಿದರು. ದಿನಾಂಕ 06.07.2018 ರಂದು ನಮ್ಮ ಹೊಟೇಲಗೆ ನೇ ಆರೋಪಿ ರಾಠೋಡ ಈತನು ಮಾಧ್ಯಾಹ್ನ ಸುಮಾರು 1.30 ಗಂಟೆಗೆ ಬಂದಿರುತ್ತಾರೆಂದು, ಅವರನ್ನು ಸಿನಿಯರ ಲೇಬರ ಇನ್ಸಪೆಕ್ಟರ ಜಾದವ ಇವರು ಕಳುಹಿಸಿರುತ್ತಾರೆಂದು, ಜನವರಿಯಿಂದ ಇಲ್ಲಿವರೆಗೆ 6 ತಿಂಗಳ 6000/- ಹಣವನ್ನು ಕೊಡುವಂತೆ ಮತ್ತು ಮುಂದಿನ ತಿಂಗಳಿಂದ ಪ್ರತಿ ತಿಂಗಳು 1000/- ಹಣವನ್ನು ಲಂಚ ಕೊಡಬೇಕು ಅಥವಾ ಒಂದೇ ಸಲ ವರ್ಷಕ್ಕೆ 10000/- ಲಂಚ ಕೊಡಬೇಕೆಂದು ಚಾಸಾ-2 ತೇಜಸ ನಮ್ಮ ಮ್ಯಾನೇಜರಗೆ ಈ ರೀತಿ ಹೇಳಿದ ಬಗ್ಗೆ ದಿನಾಂಕ 06.07.2018 ರಂದು ನನಗೆ ಹೇಳಿದರು. 2 ನೇ ಆರೋಪಿಯು ನಮ್ಮ ಹೊಟೇಲಗೆ ಆ ದಿನ ಬಂದು ಈ ರೀತಿ ಹೇಳಿದ

ವಿಷಯವನ್ನು ನನಗೆ ಚಾಸಾ-2 ತೇಜಸ ಫೋನ ಮೂಲಕ ಹೇಳಿದಾಗ ನಾನು ಚಾಸಾ-2 ತೇಜಸಗೆ ಆತ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ವಿಡಿಯೋ ಆಡಿಯೋ ಮಾಡಿಕೊಳ್ಳುವಂತೆ ಹೇಳಿದೆನು. ಅದರಂತೆ ಚಾಸಾ-2 ತೇಜಸ ಇವರು ದಿನಾಂಕ 06.07.2018 ರಂದು ಮಧ್ಯಾಹ್ನ 2 ನೇ ಆರೋಪಿ ಹೊಟೇಲಗೆ ಬಂದಾಗ 2 ನೇ ಆರೋಪಿ ಮತ್ತು ಚಾಸಾ 2 ರವರ ನಡುವಿನ ಸಂಭಾಷಣೆಯನ್ನು ವಿಡಿಯೋ ಆಡಿಯೋ ರೆಕಾರ್ಡ ಮಾಡಿದ್ದರು. ಈ ರೀತಿ ವಿಡಿಯೋ ಆಡಿಯೋ ರೆಕಾರ್ಡ ಮಾಡಿದ್ದನ್ನು ನನಗೆ ಚಾಸಾ-2 ತೇಜಸ ಹೇಳಿದನು. ದಿನಾಂಕ 07.07.2018 ರಂದು ನನ್ನ ಪಾಲುದಾರರಾದ ಚಾಸಾ-1 ರವಿ ಶಿಂದೆ ಇವರು ಬೆಳಗಾವಿ ಎಸಿಬಿ ಪೊಲೀಸರಿಗೆ ದೂರು ಕೊಟ್ಟರು. ದಿನಾಂಕ 07.07.2018 ರಂದು 2 ನೇ ಆರೋಪಿಯು ನಮ್ಮ ಹೊಟೇಲಗೆ ಬಂದು ಹಿರಿಯ ಕಾರ್ಮಿಕ ನಿರೀಕ್ಷಕರು ಕೇಳಿದ ಲಂಚದ ಹಣ ಕೊಡುವಂತೆ ಚಾಸಾ-2 ತೇಸಜಗೆ ಹೇಳಿದಾಗ ಅವರು ನಮ್ಮ ಕಡೆ 6000/- ಹಣ ಇಲ್ಲ ಕಡಿಮೆ ಮಾಡುವಂತೆ ಹೇಳಿ ರೂ.3000/- ಹಣವನ್ನು 2 ನೇ ಆರೋಪಿಗೆ ಕೊಟ್ಟ ಬಗ್ಗೆ ನನ್ನ ಪಾಲುದಾರರಾದ ಚಾಸಾ-1 ರವಿ ಶಿಂದೆ ಇವರು ನನಗೆ ಈ ಘಟನೆ ಬಗ್ಗೆ ಹೇಳಿದರು. 2 ನೇ ಆರೋಪಿಯು 3000/- ಲಂಚದ ಹಣ ಪಡೆದಾಗ ಆತನನ್ನು ಟ್ರ್ಯಾಪ ಮಾಡಲಾಯಿತು ಎಂದು ನನಗೆ ಚಾಸಾ-1 ರವಿ ಶಿಂದೆ ಹೇಳಿದರು. ಇವುಗಳನ್ನೆಲ್ಲಾ ನಾನು ದಿನಾಂಕ 09.07.2018 ರಂದು ಎಸಿಬಿ ಪೊಲೀಸ ಇನ್ಸಪೆಕ್ಟರಗೆ ನನ್ನ ಹೇಳಿಕೆ ಕೊಟ್ಟಾಗ ಹೇಳಿದೆನು.

ಪಾಟೀ ಸವಾಲುಃ **2** ನೇ ಆರೋಪಿ ಪರ ಮಾನ್ಯ ಶ್ರೀ. ಬಿಜೆಜಿ ವಕೀಲರಿಂದಃ

ನಿಮಗೆ ಚಾಸಾ-2 ತೇಜಸ ಇವರು ದಿನಾಂಕ 07.07.2018 ರಂದು ಗಲ್ಲೆಯಲ್ಲಿದ್ದ 3000/- ಹಣವನ್ನು ಅವರು 2 ನೇ ಆರೋಪಿಗೆ ಕೊಟ್ಟರೆಂದು ಹೇಳಿದ್ದಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಮತ್ತು ಚಾಸಾ-1 ರವಿ ಶಿಂದೆ ನಡುವೆ ರಸೋಯಿ ದಿ ಪಂಜಾಬಿ ಕಿಚನ್ ಹೊಟೇಲನ್ನು ಪಾಲುದಾರಿಕೆಯಲ್ಲಿ ನಡೆಸಲು partnership deed ನ್ನು 2016 ನೇ ಇಸವಿಯಲ್ಲಿ ಮಾಡಲಾಗಿತ್ತು. ದಿನಾಂಕ 19.06.2018 ರಂದು ಸಿನಿಯರ ಲೇಬರ್ ಇನ್ಸಪೆಕ್ಟರವರು ದಾಖಲೆಗಳನ್ನು ಹಾಜರು ಮಾಡುವಂತೆ ನೋಟಿಸ ನೀಡಿದ್ದರು. ದಿನಾಂಕ 19.06.2018 ರಂದು ನಿಮಗೆ ಲೇಬರ ಇನ್ಸಪೆಕ್ಟರವರು ದಾಖಲೆಗಳನ್ನು ಹಾಜರು ಮಾಡುವಂತೆ ನೋಟಿಸ ನೀಡಿದ ಮೇರೆಗೆ ನೀವು ದಾಖಲೆಗಳನ್ನು ಲೇಬರ ಇನ್ಸಪೆಕ್ಟರ ಕಚೇರಿಗೆ ತೆಗೆದುಕೊಂಡು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನಾವು ತೆಗೆದುಕೊಂಡು ಹೋಗಿ ಕೊಟ್ಟಿಲ್ಲ ನಮ್ಮ ಹೊಟೇಲಗೆ ಬಂದ ಸಿನಿಯರ ಲೇಬರ ಇನ್ಸಪೆಕ್ಟರ ಜಾದವ ಇವರೇ ನಮ್ಮ ಹೊಟೇಲನಲ್ಲಿದ್ದ ಲೇಬರ ರಜಿಸ್ಟರ , ವೇತನ ಪುಸ್ತಕ, ಹಾಜರಿ ಪುಸ್ತಕ ಇವುಗಳನ್ನೆಲ್ಲಾ ಅವರೇ ತೆಗೆದುಕೊಂಡು ಹೋಗಿದ್ದರು ಎನ್ನುತ್ತಾರೆ. ಸಿನಿಯರ ಲೇಬರ ಇನ್ಸಪೆಕ್ಟರ ಇವರುನೋಟಿಸ ನೀಡಿ ಅವರೇ ಮೂಲ ದಾಖಲೆಗಳಾದ ಲೇಬರ ರಜಿಸ್ಟರ , ವೇತನ ಪುಸ್ತಕ, ಹಾಜರಿ ಪುಸ್ತಕ ಇವುಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾವು ಪೊಲೀಸರಿಗೆ ದೂರು ಕೊಟ್ಟಿಲ್ಲ. ರಸೋಯಿ ದಿ ಪಂಜಾಬಿ ಕಿಚನ್ ಈ ಹೊಟೇಲದಿಂದ 500 ಅಡಿ ದೂರದಲ್ಲಿ ತಿಲಕವಾಡಿ ಪೊಲೀಸ ಠಾಣೆ ಇದೆ ಎಂದರೆ ನಿಜ. ಚಾಸಾ-2 ತೇಜಸ ಈತನು

ಆತ ಮತ್ತು 2 ನೇ ಆರೋಪಿಯ ನಡುವೆ ಸಂಭಾಷಣೆಯನ್ನು ವಿಡಿಯೋ ಆಡಿಯೋ ರೆಕಾರ್ಡ ಮಾಡಿದ್ದನ್ನು ಚಾಸಾ-2 ತೇಜಸ ಈತನು ನನಗೆ ಅದೇ ದಿನ ಆತನ ಮೊಬೈಲ ಫೋನನಲ್ಲಿ ರೆಕಾರ್ಡ ಇದುದ್ದನ್ನು ನನಗೆ ಪ್ಲೇ ಮಾಡಿ ತೋರಿಸಿ ಕೇಳಿಸಿದ್ದಾನೆ.ದಿನಾಂಕ 09.07.2018 ರಂದು ನಾನು ಪೊಲೀಸ ಇನ್ಸಪೆಕ್ಟರವರಿಗೆ ಕೊಟ್ಟ ಹೇಳಿಕೆಯಲ್ಲಿ ದಿನಾಂಕ 06.07.2018ರಂದು ಚಾಸಾ-2 ತೇಜಸ ಈತನು ಆತನ ಮೊಬೈಲ ಫೋನನಲ್ಲಿದ್ದ ವಿಡಿಯೋ ಆಡಿಯೋ ರೆಕಾರ್ಡನ್ನು ನನಗೆ ಪ್ಲೇ ಮಾಡಿ ತೋರಿಸಿ ಕೇಳಿಸಿದನೆಂದು ಹೇಳಿರುವುದಿಲ್ಲ. ದಿನಾಂಕ 19.06.2018 ರಂದು ಸಿನಿಯರ ಲೇಬರ ಇನ್ಸಪೆಕ್ಟರವರು ನಿಮ್ಮ ಹೊಟೇಲಗೆ ಬಂದಿದ್ದ ವಿಷಯವನ್ನು ನಿಮಗೆ ಚಾಸಾ-2 ತೇಜಸ ಎಷ್ಟು ಗಂಟೆಗೆ ಹೇಳಿದ್ದು ಎಂದರೆ ಸಾಕ್ಷಿಯು ನನಗೆ ಸಂಜೆ ಹೇಳಿದ್ದರು, ಆದರೆ ಸಮಯ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ 19.06.2018 ರಂದು ಸಿನಿಯರ ಲೇಬರ ಇನ್ಸಪೆಕ್ಟರವರು ನಮ್ಮ ಹೊಟೇಲನಿಂದ ವೇತನ ಪುಸ್ತಕ, ಹಾಜರಿ ಪುಸ್ತಕ, ಲೇಬರ ರಜಿಸ್ಟರ ಪುಸ್ತಕ ಇವುಗಳನ್ನು ತೆಗೆದುಕೊಂಡು ಅವರ ಕಚೇರಿಗೆ ಹೋದರೆಂದು ನಾನು ಪೊಲೀಸ ಇನ್ಸಪೆಕ್ಟರವರಿಗೆ ಕೊಟ್ಟ ಹೇಳಿಕೆಯಲ್ಲಿ ಹೇಳಿಲ್ಲ. ಸಿನಿಯರ ಲೇಬರ ಇನ್ಸಪೆಕ್ಟರವರು ಈ ರೀತಿ ನಮ್ಮ ಹೊಟೇಲನಿಂದ ದಿನಾಂಕ 19.06.2018 ರಂದು ದಾಖಲೆಗಳನ್ನು ತೆಗೆದುಕೊಂಡು ಹೋದರೆಂದು ಹೇಳಲು ನಮ್ಮ ಹೊಟೇಲನ ಯಾವುದೇ ದಾಖಲೆಗಳಲ್ಲಿ ಆ ರೀತಿ ನಮೂದು ಮಾಡಿಲ್ಲ. ರಸೋಯಿ ದಿ ಪಂಜಾಬಿ ಕಿಚನ್ ಇದು ಆರ್‌ಪಿಡಿ ಕ್ರಾಸನಲ್ಲಿ 20 ವರ್ಷಗಳಿಂದ ಇದೆ ಎಂದರೆ ಸಾಕ್ಷಿಯು ಆ ಹೊಟೇಲ 2016ಕ್ಕಿಂತಲೂ ಹಿಂದಿನಿಂದಲೂ ಇತ್ತು, ಆದರೆ ನಾನು ಮತ್ತು ಚಾಸಾ-1 ರವರು 2016ನೇ

ಇಸವಿಯಿಂದ ಆ ಹೊಟೇಲನ್ನು ನಡೆಸಲು ಪ್ರಾರಂಭ ಮಾಡಿದೇವು ಎನ್ನುತ್ತಾರೆ. ದಿನಾಂಕ 19.06.2018 ರಂದು ಸಿನಿಯರ ಲೇಬರ ಇನ್ಸಪೆಕ್ಟರವರು ನಮ್ಮ ಹೊಟೇಲಗೆ ಬಂದು ಪ್ರತಿ ತಿಂಗಳು ರೂ.1000/- ಅಥವಾ ವರ್ಷಕ್ಕೆ 10000 ಸಾವಿರ ಕೊಡಬೇಕೆಂದು ಚಾಸಾ-2 ರವರಿಗೆ ಹೇಳಿ ವಿಜಿಟಿಂಗ್ ಕಾರ್ಡ ಕೊಟ್ಟು ಹೋದರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 06.07.2018 ರಂದು 2 ನೇ ಆರೋಪಿ ಮಧ್ಯಾಹ್ನ ನಮ್ಮ ಹೊಟೇಲಗೆ ಬಂದು ಅವರನ್ನು ಜಾದವ ಕಳುಹಿಸಿರುತ್ತಾರೆಂದು ಚಾಸಾ-2 ರವರಿಗೆ ಹೇಳಿ 6 ತಿಂಗಳದ ರೂ.6000/- ಕೊಡುವಂತೆ ಇನ್ನುಮುಂದೆ ಪ್ರತಿ ತಿಂಗಳು 1000/-ಹಣವನ್ನು ಅಥವಾ ವರ್ಷಕ್ಕೆ 10000 ಸಾವಿರ ಲಂಚದ ಹಣ ನೀಡುವಂತೆ ಕೇಳಿದರೆಂದು ಈ ವಿಷಯವನ್ನು ನನಗೆ ಚಾಸಾ-2 ರವರು ಫೋನ ಮಾಡಿ ತಿಳಿಸಿದಾಗ ನಾನು ವಿಡಿಯೋ ಆಡಿಯೋ ರೆಕಾರ್ಡ ಮಾಡುವಂತೆ ಹೇಳಿದೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ರವರು ನನಗೆ ಆತ ಮತ್ತು 2 ನೇ ಆರೋಪಿಯ ನಡುವಿನ ಸಂಭಾಷಣೆ ವಿಡಿಯೋ ಆಡಿಯೋ ರೆಕಾರ್ಡ ಪ್ಲೇ ಮಾಡಿ ತೊರಿಸಿ ಕೇಳಿಸಿದನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 09.07.2018 ರಂದು ನಾನು ಎಸಿಬಿ ಕಚೇರಿಗೆ ಹೋದಾಗ ಎಸಿಬಿ ಪೊಲೀಸರು ನನಗೆ ಯಾವುದೇ ವಿಡಿಯೋ ಆಡಿಯೋ ಪ್ಲೇ ಮಾಡಿ ತೋರಿಸಿ ಕೇಳಿಸಿಲ್ಲ. ದಿನಾಂಕ 19.06.2018 ರಂದು, 06.07.2018 ಮತ್ತು 07.07.2018 ರಂದು ನಾನು ರಸೋಯಿ ದಿ ಪಂಜಾಬಿ ಕಿಚನ್ ಹೊಟೇಲನಲ್ಲಿ ನಾನು ಈ ಘಟನೆ ಕಾಲಕ್ಕೆ ಇರಲಿಲ್ಲ. ಈ ಘಟನೆಯನ್ನು ನಾನು ಪ್ರತ್ಯೇಕ್ಷ ನೋಡಿಲ್ಲ. ದಿನಾಂಕ 09.07.2018 ರಂದು

ನನ್ನ ಹೇಳಿಕೆ ಎಂದು ಒಂದು ಸುಳ್ಳು ದಾಖಲೆಯನ್ನು ಪೊಲೀಸ ಇನ್ಸಪೆಕ್ಟರವರು ತಯಾರ ಮಾಡಿದ್ದನ್ನು ನಾನು ಓದಿಕೊಂಡು ಬಂದು ಅದೇ ರೀತಿ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಚಾಸಾ-1 ರವಿ ಶಿಂದೆ ಆಗಲೀ, ಚಾಸಾ-2 ತೇಜಸ ಆಗಲೀ ಯಾವುದೇ ವಿಷಯವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ಮಾನ್ಯ ಶ್ರೀ.ಎಚ್‌ಸಿಎಸ್ ವಕೀಲರಿಂದಃ</u>

1 ನೇ ಆರೋಪಿ ಪರ ಮಾನ್ಯ ಶ್ರೀ.ಎಚ್‌ಸಿಎಸ್ ವಕೀಲರ ಪರವಾಗಿ ಶ್ರೀ.ಎಂವಾಯಟಿ ವಕೀಲರು ವೇಳೆ ಕೋರಿದ್ದು, ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.